# ಸಬಲೀಕರಣದತ್ತ ದಿಟ್ಟ ಹೆಜ್ಜೆ

## ಹಳ್ಳಿ ಮಹಿಳೆಯರ ಯಶೋಗಾಥೆ



**ಮಹಿಳೆಯರ ಆರ್ಥಿಕ ಸ್ವಾವಲಂಬನೆ ಕನಸು ಇಂದು ನಿನ್ನೆಯದಲ್ಲ. ಬದುಕಿನಲ್ಲಿ ಆರ್ಥಿಕವಾಗಿ ಸದೃಢರಾದರೆ ಕುಟುಂಬ ನಿರ್ವಹಣೆ, ಮಕ್ಕಳ ಓದು, ಆರೋಗ್ಯ ಎಲ್ಲವೂ ಸುಗಮವಾಗುತ್ತದೆ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತೋರಣಗಲ್‌ನಲ್ಲಿ 'ಜೆಎಸ್‌ಡಬ್ಲ್ಯು ಶಕ್ತಿ' ಯೋಜನೆ ನಡೆಸುತ್ತಿರುವ ಬಿಪಿಒ ನೂರಾರು ಮಹಿಳೆಯರಿಗೆ ಉದ್ಯೋಗ ಒದಗಿಸಿ ಬಡಹೆಣ್ಣು ಮಕ್ಕಳ ಬಾಳಿನಲ್ಲಿ ಮಂದಹಾಸ ಬೀರುವಂತೆ ಮಾಡಿರುವುದು ಶ್ಲಾಘನೀಯ.**

■ **ಉಮಾ ಅನಂತ್**

ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕು ಯಳವತ್ತಿ ಗ್ರಾಮದ ಸುಜಾತ ಜಿ. ಉದ್ದಿ ಓದಿದ್ದು ಎಸ್ಸೆಸ್ಸೆಲ್ಸಿ. ಮನೆಯಲ್ಲಿ ಬಡತನ, ಮದುವೆಯಾಗಿ ಹುಬ್ಬಳ್ಳಿಗೆ ಬಂದಾಗ ಪತಿಯ ಗಳಿಕೆ ಮನೆ ನಿರ್ವಹಣೆಗೆ ಏನೇನು ಸಾಲದು ಎಂಬುದು ಗೊತ್ತಾಯಿತು. ಇಬ್ಬರು ಮಕ್ಕಳಾದವು. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಲಾರಂಭಿಸಿತು. ಆಗಲೇ ಸಂಡೂರು ತಾಲ್ಲೂಕು ತೋರಣಗಲ್ ಸಮೀಪದ ಜೆಎಸ್‌ಡಬ್ಲ್ಯು ಮಹಿಳಾ ಉದ್ಯಮ ಶೀಲತಾ ಘಟಕ (ಜೆಎಸ್‌ಡಬ್ಲ್ಯು ಶಕ್ತಿ) ದಲ್ಲಿ ಕೆಲಸ ಇದೆ ಎಂಬುದು ಗೊತ್ತಾಗಿ ಅಲ್ಲಿಗೆ ಹೋಗಿ ಉದ್ಯೋಗಕ್ಕೆ ಸೇರಿದರು. ಆಗ ಆಕೆಯ ಸಂಬಳ ಕೇವಲ ಒಂದು ಸಾವಿರ ರೂಪಾಯಿ. ಸಿಕ್ಕಿದ ಸಂಬಳದಲ್ಲೇ ಮನೆಯನ್ನೂ ನಿಭಾಯಿಸಿಕೊಂಡು ಮಕ್ಕಳ ಶಿಕ್ಷಣವನ್ನೂ ಪೂರೈಸಿದ ಸುಜಾತ ಅವರ ಮಕ್ಕಳಿಬ್ಬರು ಸದ್ಯ ಎಂಬಿಎ ಹಾಗೂ ಡಿಪ್ಲೊಮ ಪದವೀಧರರು. ಕೆಲಸಕ್ಕೆ ಸೇರಿ 13 ವರ್ಷಗಳಾಗಿವೆ. ಈಗ ಸುಜಾತ ಸಂಪೂರ್ಣ ಸ್ವಾವಲಂಬಿ.

***

ಹೊಸಪೇಟೆ ತಾಲ್ಲೂಕು ಗಾದಿಗನೂರು ಗ್ರಾಮದ ಪದ್ಮಾವತಿ ಕಥೆಯೇ ಬೇರೆ. ಈಕೆ ಒಂಬತ್ತು ತಿಂಗಳ ಮಗುವಿದ್ದಾಗಲೇ ಪೋಲಿಯೊಗೆ ತುತ್ತಾಗಿ ಮುಂದೆ ನಡೆದಾಡಲು ಕಷ್ಟವಾಯಿತು. ಅಪ್ಪ ವ್ಯವಸಾಯದಲ್ಲಿ ತೊಡಗಿದ್ದರೂ ಬರುತ್ತಿದ್ದ ಆದಾಯ ಅತ್ಯಲ್ಪ. ಕುಟುಂಬ ನಿರ್ವಹಣೆಗೆ ಪರದಾಡುವ ಪರಿಸ್ಥಿತಿ. ಹೇಗೋ ಎಸ್ಸೆಸ್ಸೆಲ್ಸಿವರೆಗೆ ಓದಿದ ಪದ್ಮಾವತಿ ಮುಂದೆ ಮನೆಯವರಿಗೆ ಆರ್ಥಿಕ ಸಹಾಯ ಮಾಡುವ ಪಣತೊಟ್ಟರು. ಆಗ ನೆರವಿಗೆ ಬಂದದ್ದು ಬಿಪಿಒ. ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿರುವ ಪದ್ಮಾವತಿ ಕುಟುಂಬ ಈಗ ಆರ್ಥಿಕವಾಗಿ ಬಲವಾಗಿದೆ. ಕಷ್ಟಗಳೆಲ್ಲ ಹೋಗಿ ಈಗ ಸಂತೃಪ್ತ ಜೀವನ ಈಕೆಯದಾಗಿದೆ.

***

ಸಂಡೂರು ತಾಲ್ಲೂಕು ತಾರಾನಗರದ ಮೇರಿಗೆ ತೋರಣಗಲ್‌ನಲ್ಲಿ ಕೆಲಸ ಇದೆ ಎಂಬುದು ಸ್ನೇಹಿತರ ಮೂಲಕ ಗೊತ್ತಾಯಿತು. ಅಪ್ಪನ ಆರೋಗ್ಯ ಸರಿ ಇಲ್ಲದ ಕಾರಣ ವಿಪರೀತ ಖರ್ಚು ಬರುತ್ತಿತ್ತು. ಮನೆಗೆ ಹೇಗಾದರೂ ಸಹಾಯ ಮಾಡಬೇಕು ಎನ್ನುವ ಹಟ ಮನಸ್ಸಿನಲ್ಲಿತ್ತು. ಹೀಗಾಗಿ ಇಲ್ಲಿ ಕೆಲಸ ಸಿಕ್ಕಿದ ಕೂಡಲೇ ಖುಷಿಯಿಂದ ಸೇರಿದರು. ಬರುವ ಸಂಬಳವನ್ನು ತಂದೆಯ ಔಷಧಿಗೆ, ತಂಗಿಯ ವಿದ್ಯಾಭ್ಯಾಸಕ್ಕೆ, ಮನೆಯ ಖರ್ಚಿಗೆ ವಿನಿಯೋಗಿಸಿದರು. ಸದ್ಯ ಆರ್ಥಿಕ ಸ್ವಾವಲಂಬಿಯಾದ ಸಮಾಧಾನ ಮೇರಿಗಿದೆ.

***

ಬಡತನ ನಿರ್ಮೂಲನೆ, ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾವಲಂಬನೆ ಗಾಂಧೀಜಿಯವರ ಕನಸು. ಈ ಕನಸನ್ನು ನನಸು ಮಾಡುತ್ತಾ ಬಡ ಮಹಿಳೆಯರ ಬಾಳಲ್ಲಿ ಬೆಳಕಿನ ಸಿಂಚನ ಮೂಡಿಸಲು ರಾಜ್ಯದಲ್ಲಿ ಹಲವು ಸ್ವಯಂಸೇವಾ ಸಂಸ್ಥೆಗಳು ನಿಸ್ವಾರ್ಥವಾಗಿ ದುಡಿಯುತ್ತಿವೆ. ವಿದ್ಯಾಭ್ಯಾಸ ಕಡಿಮೆ ಇದ್ದರೂ ಮಹಿಳೆ ಇಂದು ದುಡಿಮೆಯಲ್ಲಿ ಮುಂದೆ ಸಾಗಿದ್ದಾಳೆ. ಆರ್ಥಿಕವಾಗಿ ಸದೃಢವಾಗುವುದರ ಜತೆಗೆ ಇಡೀ ಕುಟುಂಬ ನಿರ್ವಹಣೆಯನ್ನು ಸಲೀಸಾಗಿ ನಡೆಸಿಕೊಂಡು ಬರುವ ಚಾಕಚಕ್ಯತೆ ಹೊಂದಿದ್ದಾಳೆ.


ಸಂಗೀತಾ ಜಿಂದಾಲ್

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತೋರಣಗಲ್ ಸಮೀಪದ ಜೆಎಸ್‌ಡಬ್ಲ್ಯು ಟೌನ್‌ಶಿಪ್‌ನಲ್ಲಿ ಮಹಿಳಾ ಸಬಲೀಕರಣ ಕಾರ್ಯಕ್ರಮ ಯಶಸ್ಸಿನತ್ತ ಹೆಜ್ಜೆ ಹಾಕಿದೆ. ಮಹಿಳೆಯರ ಆರ್ಥಿಕ ಸಶಕ್ತತೆ, ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ, ಆರೋಗ್ಯ ಚಿಂತನೆ ಮುಂತಾದ ಹತ್ತು ಹಲವು ಕಾರ್ಯಗಳಿಗಾಗಿ 2005ರಲ್ಲಿ ಆರಂಭಿಸಿದ 'ಜೆಎಸ್‌ಡಬ್ಲ್ಯು ಶಕ್ತಿ' ಬಿಪಿಒ ಇದೀಗ ನೂರಾರು ಮಹಿಳೆಯರ ಬದುಕಿನಲ್ಲಿ ಮಂದಹಾಸ ಬೀರುವಂತೆ ಮಾಡಿದೆ. ಆರ್ಥಿಕತೆಯ ಮಟ್ಟಿಗೆ ಸಮಾಜದ ಅತ್ಯಂತ ಕೆಳಸ್ತರದ ಹಾಗೂ ಕನಿಷ್ಠ ಎಸ್‌ಎಸ್‌ಎಲ್‌ಸಿ ಕಲಿತ 18 ವರ್ಷ ಮೀರಿದ ಮಹಿಳೆಯರಿಗೆ ತರಬೇತಿ ನೀಡಿ ಉದ್ಯೋಗವನ್ನೂ ಕಲ್ಪಿಸಿಕೊಟ್ಟಿದೆ ಈ ಸಬಲೀಕರಣ ವ್ಯವಸ್ಥೆ.

ತೋರಣಗಲ್ ಸುತ್ತಮುತ್ತಲಿನ ಸುಮಾರು 27 ಹಳ್ಳಿಗಳ ಆಯ್ದ 150 ಮಹಿಳೆಯರು ಇಂದು ಆರ್ಥಿಕವಾಗಿ ಸಂಪೂರ್ಣ ಸ್ವತಂತ್ರರಾಗಿದ್ದು, ತಮ್ಮ ಜೀವನೋಪಾಯದ ಹಾದಿ ಕಂಡುಕೊಂಡಿದ್ದಾರೆ. ಕುಟುಂಬದ ನಿರ್ವಹಣೆ, ಮಕ್ಕಳ ಶಿಕ್ಷಣ, ಮನೆಯ ಸಂಪೂರ್ಣ ನಿಭಾವಣೆಯನ್ನು ಈ ಮಹಿಳೆಯರೇ ಮಾಡುತ್ತಿರುವುದಲ್ಲದೆ ಭವಿಷ್ಯಕ್ಕಾಗಿ ಹಣ, ಒಡವೆಗಳಂತಹ ಆಸ್ತಿಯನ್ನೂ ಉಳಿಸಿ ಉತ್ತಮ ಜೀವನವನ್ನು ರೂಪಿಸಿಕೊಂಡಿದ್ದಾರೆ.